ಕ್ಯೂಟುವ್ ಇಂಜಿನಿಯರ್ ಸಾಹೆಬರವರಿಂದ ತಲ್ಪಿದ್ದನ್ನ ವ್ಯೋದಲಾಯಿತು. ಸವ್ವದಲ್ಲಿ ಮೊಬಲಗು ಯಾವದೂ ಇಲ್ಲವಾ, ಈ ಅಂದಾಜು ಮುಂಜೂರೀ ವಿಚಾರ ಪ್ರಕೃತ ನಿಲ್ಲಿಸಿರಬೇಕೆಂದು ತೀರ್ಮಾನವಾಯಿತು.

8. 1895—96ನೇ ಸಾಲಿನ ಡಿಸ್ಟ್ರಿಕ್ಟು ಫಂಡ್ ಬಜೆಟ್ಟಿನಲ್ಲಿ ಮುಂಜೂರಾಗಿರತಕ್ಕ ಗ್ರಾಂಟಿಗಳಲ್ಲಿ ಕೆಲವು ಬದಲು ವಣಿಗಳನ್ನ ಮಾಡಿಸಿಕೊಡಬೇಕೆಂದು ಎಗ್ಸಿಕ್ಯೂಟಿವ್ ಇಂಜಿನಿಯರ್ ಸಾಹೆಬರವರ 1896ನೇ ಇಸವಿ ಮೇ 21ನೇ ವಾರ್ತಂ 451ನೇ ನಂಬರ್ ಡಾಕೆಟಿವಣಿ ಕಳುಹಿಸಿದ ಅಜ್ಞಾ ಕೇರ್ಷ ಚರ್ಚೆಯಿಂದ ವಪ್ಪಲಪಟ್ಟು, ತ್ವರ್ಯದಲ್ಲೇ ಮುಂಜೂರಾತಿಯನ್ನ ಜೇಡಿ ಗವರ್ಮೆಂಟಿಗೆ ರವಾನಿಸಬೇಕೆಂದು ತೀರ್ಮಾನವಾಯಿತು.

ಎಂ. ನಾರಾಯಣರಾವ್,
ಪ್ರೆಸಿಡೆಂಟ್, ಡಿಸ್ಟ್ರಿಕ್ಟ ಫಂಡ್ ಬೋರ್ಡ್.

ತುಮಕೂರ್ ಡಿಸ್ಟ್ರಿಕ್ಟ್ ಫಾರೆಸ್ಟ್ ಡಿಪಾರ್ಟ್‌ಮೆಂಟ್.

1896ನೇ ಇಸವಿ ಆಗಸ್ಟ್ ತಾರೀಖು 29ರಲ್ಲು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ, —ತುಮಕೂರು ಡಿಪೋದಲ್ಲಿ ಮತ್ತು ಗುಬ್ಬೀ ತಾಲ್ಲೂಕಿ ಚನ್ನಶಟ್ಟಿಹಳ್ಳಿ ಪ್ಯಾಟೇಷನಿನಲ್ಲಿರುವ ಈ ಕೆಳಗೆ ನಮೂದಿಸಿರುವ ಸಾಮಾನುಗಳನ್ನ 1896ನೇ ಇಸವಿ ಸೆಪ್ಟಂಬರ್ ತಾರೀಖು 22ರಲ್ಲು ತುಮಕೂರು ಡಿಪೋದಲ್ಲಿಯೂ ತಾರೀಖು 24ರಲ್ಲು ಚನ್ನಶಟ್ಟಿಹಳ್ಳಿ ಪ್ಯಾಟೇಷನಿನಲ್ಲಿಯೂ ತುಮಕೂರು ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರವರಿಂದ ಹರಾಜು ಮಾಡಲ್ಪಡುತ್ತೆ.

ತುಮಕೂರು ಡಿಪೋ.

ತರಹೆ.	ಸಂಖ್ಯೆ.	ಸಲೆ ಅಡಿ.	ಅಂಗುಲ.	ಸೆಂಟ್ಸ್.
ಕ್ಯಾಸರೀನ ಮರಗಳು	249	568	6	3
ಹಳ್ಳೀ ಬಿದರುಗಳು	544			

ಗುಬ್ಬೀ ತಾಲ್ಲೂಕು ಚನ್ನಶಟ್ಟಿಹಳ್ಳಿ ಪ್ಯಾಟೇಷ್ಣ.

ತರಹೆ.	ಸಂಖ್ಯೆ.	ಸಲೆ ಅಡಿ.	ಅಂಗುಲ.	ಸೆಂಟ್ಸ್.
ಕ್ಯಾಸರೀನ ಮರಗಳು	1190			

ಹರಾಜು ಮೊಬಲಗು ಪಾವತಿ ಆದ ತಾರೀಖು ಲಾಗಾಯತು ಇದರ ನಿಗೇವಾನಿ ಹರಾಜ್ದಾರನ್ನೇ ಹೊಂದಿರುತ್ತೆ.

ಷರತ್ತುಗಳು—ಹರಾಜ್ ಕೈದಾದ ಕೂಡ್ಲೆ ಕಾಲುಹಿಸ್ಸೇ ಮೊಬಲಗು ಕೇವಣಿ ತೀರ್ಕ ಹಾಜರ್ಮಾಡಬೇಕು. ಬಾಕಿ ಮೊಬಲಗನ್ನ ಹರಾಜ್ ತಾರೀಖು ಲಾಗಾಯತು 1 ವಾರದವಳಗಾಗಿ ಹಾಜರ್ಮಾಡಬೇಕು. ಇದಕ್ಕೆ ತಪ್ಪಿದರೆ ದುಸರೆ ಹರಾಜು ಮಾಡಲ್ಪಡುವದಲ್ಲದೆ ಲುಕ್ಸಾನಿಗೆ ಮೊದಲು ಹರಾಜ್‌ದಾರನ್ನ ಗುರಿಮಾಡಲ್ಪಡುತ್ತೆ. ಸಾಮಾನುಗಳೆಲ್ಲಾ ಹರಾಜು ತಾರೀಖು ಲಾಗಾಯತು 10 ದಿವಸದವಳಗಾಗಿ ಸಾಗಿಸಿಕೊಳ್ಳಬೇಕು. ಇತರ ತಪ್ಪಿಲುಗಳಿಗೆ—1895ನೇ ಇಸವಿ ಏಪ್ರೆಲ್ 25ನೇ ಮಾರ್ಚ್ಂ ಮೈಸೂರ ಗೆಜೆಟ್ 1ನೇ ಭಾಗದಲ್ಲಿ ಪ್ರಾಯಿಪಾಗಿರುವ 1895ನೇ ಇಸವಿ ಮಾರ್ಚಿ 15ನೇ ಮಾರ್ಚ್ಂ 1522ನೇ ನಂಬರು ಗವರ್ಮೆಂಟ್ ನೋಟಿಫಿಕೇಷ್ಣನೋಡಿ.

ಯಂ. ವೆಂಕಟನಾರಾಯಪ್ಪ,
ಡಿಸ್ಟ್ರಿಕ್ಟ್ ಫಾರೆಸ್ಟ್ ಆಫಿಸರ್.

ಫೈಂಚ್‌ರಾಕ್ಸ್ ಸಬ್ ಡಿವಿಜ್ಞ್.

ಸಾಗುವಳಿಗೋಸ್ಕರ ಜಮ್ರ್ಮಿ ಹಿಡುವಳಿ ಹರಾಜು.

ತಾರೀಖು 1ನೇ ಆಗಸ್ಟ್ 1896.

ಇದರಿಂದ ತಿಳಿಯಪಡಿಸುವದೇನಂದರೆ,—ಲ್ಯಾಂಡ್ ರೆವಿನ್ಯೂ ಕೋಡ್ ಮತ್ತು ರೂಲ್ಸ್‌ಮೇರೆ ಇದರಡೀಲಿ ಕಂಡ ಜಮ್ರ್ಮಿ ಹಿಡುವಳಿಯನ್ನು ಕೆಳಗೆ ನಮೂದಿಸಿರುವ ಕಾಲ ಮತ್ತು ಸ್ಥಳದಲ್ಲಿ ಬಹಿರಂಗವಾದ ಹರಾಜು ಮೂಲಕ ವಿಲೇವಾರಿಸಲ್ಪಡುವದು ಮತ್ತು ಸರ್ಕಾರ ರವಾನಿಗೆ ಪೇಲ್ವಟ್ಟ್ ಆಖೈರ್ ಚಡಪನ್ನವಾಲ್ ಮಾಡತಕ್ಕೆ ಹರಿಸಿ ಸ್ವತ್ತು ಕೊಡಿಸಲ್ಪಡುವದು.

2. ಹರಾಜು ಕೈದಾದ ಕೂಡ್ಲೆ ಚಡಪನ್ನವಾಲ್‌ದಾರನು ತನ್ನ ಸವ್ವಾಲ್ ಮೊಬಲಗು ಖೈಕೆ ಶೇಕಡಾ 25 ರೂಪ್ಯಿಗಳ ಪ್ರಕಾರ ಆಗುವ ಮೊಬಲಗನ್ನು ಕೇವಣಿ ಇಡಬೇಕು. ಹಾಗಿಲ್ಲವಾದರೆ ಸ್ವತ್ತು ಕೂಡ್ಲೆ ಪುನಹ ಹರಾಜು ಮಾಡಲ್ಪಡುವದು.

3. ಹರಾಜು ತಾರೀಖು ಲಾಗಾಯತು 15ನೇ ದಿನದ ಸೂರ್ಯಾಸ್ತಮಾನಕ್ಕೆ ಪೂರ್ವವೇ ಅಥವಾ ಅಂಥಾ 15ನೇ ದಿನವು ಸರ್ಕಾರೀ ರಜಾ ದಿನವಾಗಿದ್ದರೆ ಆ ತರುವಾಯ ಆಫಿಸು ಖುಲ್ಲಾ ಆಗುವ ಮೊದಲನೇ ದಿನ ಸೂರ್ಯಾಸ್ತ ಮಯಕ್ಕೆ ಪೂರ್ವವೇ ಪೂರಾ ಹರಾಜು ಮೊಬ್ಬಲರನ್ನ ಸ್ವಾನತಿ ಮಾಡಬೇಕು.